Tel No.: 08185 200728
e-mail: registrar@uahs.edu.in

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

# KELADI SHIVAPPA NAYAKA UNIVERSITY OF AGRICULTURAL AND HORTICULTURAL SCIENCES, SHIVAMOGGA

**Main Campus: Iruvakki, SagaraTaluk, Shivamogga District, Karnataka**

**Dr. K.C. Shashidhar**
**Registrar**

**Office of the Registrar**
**Sharavathi Administrative Block,**
**II floor, Iruvakki-577 412**

No. KSNUAHS(S)/R/55th Minutes/ 1636 /2024-25 Date: 12-02-2025

To,

| | | | |
|---|---|---|---|
| 1. | **Dr. R. C. Jagadeesha.,** Vice Chancellor and Chairman, Board of Management, KSNUAHS, Shivamogga. | 2. | **Sri. G. H. Srinivasa, MLA,** & Hon'ble Member of the Board of Management, KSNUAHS, Shivamogga,, Tarikere, Chikkmagaluru District |
| 3. | **Principal Secretary/Secretary/Deputy Secretary** Agriculture Department, GoK, 4th Floor, M.S. Building, Bangalore. | 4. | **The Additional Chief Secretary/Special Secretary/Deputy Secretary,** Finance Department, GoK, Vidhana Soudha, Bangalore. |
| 5. | **Principal Secretary/Secretary/Deputy Secretary,** Horticulture Department, GoK, 4th floor, M. S. Building, Bangalore | 6. | **Dr. Prakash Patil,** Project Coordinator (Fruits), ICAR-Indian Institute of Horticultural Research, Hassaraghatta Lake Post, Bengaluru 560 089 |
| 7. | **Dr. P.K. Basavaraja,** Hon'ble Member of the Board of Management, KSNUAHS, Shivamogga, Vidyaranyapura, Bangalore. | 8. | **Dr. B.K. Kumaraswamy,** Hon'ble Member of the Board of Management, KSNUAHS, Shivamogga, Basaveshwaranagar, Bengaluru. |
| 9. | **Dr. Srinivasa V.,** Dean, College of Horticulture, Mudigere | 10. | **Dr. K.C. Shashidhar,** Registrar and Member – Secretary, KSNUAHS, Shivamogga |

Sir,

Sub: Releasing the Minutes of 55th Meeting of Board of Management, KSNUAHS, Shivamogga held on 21-01-2025, for comments if any…Reg.

Ref Approval of the Vice Chancellor, KSNUAHS, Shivamogga dated: 10-02-2025.

*****

I am directed to release the Minutes of 55th Meeting of the Board of Management, KSNUAHS, Shivamogga, held on **21-01-2025** at 03.00 PM., in Board Meeting Room, Office of the Vice Chancellor, KSNUAHS, Iruvakki Campus, Shivamogga, for your kind information. Comments if any, on the minutes may please be sent to this office on or before **22-02-2025.** If no comment is received, it will be construed that the Minutes of 55th Meeting of the Board of Management is approved to release the final minutes and to take action on the Agenda.

Thanking you,

Yours faithfully,

ಕುಲಸಚಿವರು
**Registrar and Member Secretary**
Registrar
ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗ
K.S.N.U.A.H.S., Shivamogga.

Copy to:

1. The Secretary to VC – It is informed to bring the same to the kind notice of the Hon'ble Vice Chancellor, KSNUAHS, Shivamogga.
2. The BOM file.

ದಿನಾಂಕ 21-01-2025 ರಂದು ಮಧ್ಯಾಹ್ನ 03.00 ಘಂಟೆಗೆ, ಮಾನ್ಯ ಕುಲಪತಿಗಳ ಸಭಾ ಕೊಠಡಿ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿ ಆವರಣ, ಶಿವಮೊಗ್ಗದಲ್ಲಿ ನಡೆದ 55ನೇ ವ್ಯವಸ್ಥಾಪನಾ ಮಂಡಳಿ ಸಭೆಯ ನಡಾವಳಿಗಳು.

**Minutes of the 55th Meeting of the Board of Management of Keladi Shivappa Nayaka University of Agricultural and Horticultural Sciences, Shivamogga held on 21-01-2025 at 03.00 P.M, in the Meeting Hall of Vice Chancellor's Office, Iruvakki Campus, Shivamogga.**

ಭಾಗವಹಿಸಿದ ಸದಸ್ಯರು: **Members Attended:**

| | | |
|---|---|---|
| 1. | ಡಾ. ಆರ್. ಸಿ. ಜಗದೀಶ, ಮಾನ್ಯ ಕುಲಪತಿಗಳು, ಕೆ.ಶಿ.ನಾ.ಕೃ.ತೋ.ವಿ.ವಿ, ಶಿವಮೊಗ್ಗ.<br>**Dr. R. C. Jagadeesha,** Hon'ble Vice Chancellor, KSNUAHS, Shivamogga. | ಅಧ್ಯಕ್ಷರು<br>Chairman |
| 2. | ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪರವಾಗಿ ಶ್ರೀಮತಿ ಆರ್ ಮಂಜುಳ, ಉಪ ಕಾರ್ಯದರ್ಶಿಗಳು ಹಾಜರಾಗಿರುತ್ತಾರೆ.<br>**The Secretary to Government**, Horticulture Department, Government of Karnataka, Bengaluru represented by Smt. R. Manjula, Deputy Secretary, Government of Karnataka. | ಸದಸ್ಯರು<br>Member |
| 3. | ಡಾ. ಪಿ. ಕೆ. ಬಸವರಾಜ, ಶಿಕ್ಷಣ ತಜ್ಞರು, ವಿದ್ಯಾರಣ್ಯಪುರ, ಬೆಂಗಳೂರು.<br>**Dr. P. K. Basavaraja,** Eminent Educationist, Vidyaranyapura, Bengaluru. | ಸದಸ್ಯರು<br>Member |
| 4. | ಡಾ. ಬಿ. ಕೆ. ಕುಮಾರಸ್ವಾಮಿ, ಕೃಷಿ–ಕೈಗಾರಿಕೋದ್ಯಮಿ, ಬಸವೇಶ್ವರನಗರ, ಬೆಂಗಳೂರು.<br>**Dr. B. K. Kumaraswamy,** Agro-industrialist, Basaveshwaranagar, Bengaluru. | ಸದಸ್ಯರು<br>Member |
| 5. | ಡಾ. ಶ್ರೀನಿವಾಸ ವಿ., ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ಮೂಡಿಗೆರೆ.<br>**Dr. Srinivasa V.,** Dean, College of Horticulture, Mudigere (Attended online). | ಸದಸ್ಯರು<br>Member |
| 6. | ಡಾ. ಕೆ. ಸಿ. ಶಶಿಧರ, ಕುಲಸಚಿವರು, ಕೆ.ಶಿ.ನಾ.ಕೃ.ತೋ.ವಿ.ವಿ ಶಿವಮೊಗ್ಗ.<br>**Dr. K. C. Shashidhar,** Registrar, Keladi Shivappa Nayaka University of Agricultural and Horticultural Sciences, Shivamogga. | ಸದಸ್ಯ ಕಾರ್ಯದರ್ಶಿಗಳು<br>Member Secretary |

ಸಭೆಯಲ್ಲಿ ಭಾಗವಹಿಸದ ಸದಸ್ಯರು: **Members Not Attended:**

| | | |
|---|---|---|
| 1. | ಶ್ರೀ. ಜಿ. ಹೆಚ್. ಶ್ರೀನಿವಾಸ, ಮಾನ್ಯ ವಿಧಾನ ಸಭಾ ಸದಸ್ಯರು, ತರೀಕೆರೆ ಕ್ಷೇತ್ರ, ಚಿಕ್ಕಮಗಳೂರು ಜಿಲ್ಲೆ.<br>**Sri. G.H. Srinivasa,** Member of Karnataka Legislative Assembly, Tarikere Constitution, Tarikere, Chikkamagaluru District. | ಸದಸ್ಯರು<br>Member |
| 2. | ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.<br>**The Secretary to Government**, Agriculture Department, Government of Karnataka, Bengaluru. | ಸದಸ್ಯರು<br>Member |
| 3. | ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು<br>**The Additional Chief Secretary** to Government of Karnataka, Finance Department, Bengaluru | ಸದಸ್ಯರು<br>Member |
| 4. | ಡಾ. ಪ್ರಕಾಶ್ ಪಾಟೀಲ್, ಯೋಜನೆ ಸಂಯೋಜಕರು (ಹಣ್ಣುಗಳು) ಐ. ಐ. ಹೆಚ್. ಆರ್, ಹೆಸರಘಟ್ಟ, ಬೆಂಗಳೂರು.<br>**Dr. Prakash Patil,** Project Coordinator (Fruits), ICAR- IIHR, Bengaluru. | ಸದಸ್ಯರು<br>Member |

ಆರಂಭದಲ್ಲಿ ಡಾ. ಕೆ. ಸಿ. ಶಶಿಧರ, ಕುಲಸಚಿವರು ಮತ್ತು ವ್ಯವಸ್ಥಾಪನಾ ಮಂಡಳಿಯ ಸದಸ್ಯ ಕಾರ್ಯದರ್ಶಿಗಳು, ಕೆ.ಶಿ.ನಾ.ಕೃ.ತೋ.ವಿ.ವಿ. ಶಿವಮೊಗ್ಗ ಇವರು ಗೌರವಾನ್ವಿತ ಅಧ್ಯಕ್ಷರಿಗೆ ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ 55ನೇ ವ್ಯವಸ್ಥಾಪನಾ ಮಂಡಳಿಯ ಸಭೆಗೆ ಆತ್ಮೀಯ ಸ್ವಾಗತವನ್ನು ಕೋರಿದರು. ಕುಲಸಚಿವರು 55ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಪ್ರಸ್ತಾವಿಸುವ ಕಾರ್ಯಸೂಚಿಗಳನ್ನು ಪ್ರಸ್ತುತಪಡಿಸಲು ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರ ಅನುಮತಿಯನ್ನು ವಿನಂತಿಸಿದರು. ಅನುಮತಿಯ ಮೇರೆಗೆ 54ನೇ ವ್ಯವಸ್ಥಾಪನಾ ಮಂಡಳಿಯ ಸಭೆಯ ಕ್ರಮಕೈಗೊಂಡ ವರದಿ ಮತ್ತು 55ನೇ ವ್ಯವಸ್ಥಾಪನಾ ಮಂಡಳಿಯ

ಸಭೆಯ ಕಾರ್ಯಸೂಚಿಯನ್ನು ಮಂಡಿಸಿದರು, 54ನೇ ವ್ಯವಸ್ಥಾಪನಾ ಮಂಡಳಿಯ ಸಭೆಯ ಕ್ರಮಕೈಗೊಂಡ ವರದಿ ಸಭೆ ಅನುಮೋದಿಸಿತು. ತದನಂತರ, ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳನ್ನು ಚರ್ಚೆಗೆ ಕೈಗೆತ್ತಿಕೊಂಡು ನಿರ್ಣಯಗಳನ್ನು ಕೈಗೊಳ್ಳಲಾಯಿತು.

At the outset, Dr. K.C. Shashidhar, the Registrar and the Member Secretary of board of Management, KSNUAHS, Shivamogga, extended warm welcome to Hon'ble Vice Chancellor & Chairman and to all the Hon'ble Members present in the 55th BOM Meeting of KSNUAHS, Shivamogga. The Registrar requested the Chairman of BoM to accord permission to conduct Board of Management Meeting and to present the Action Taken Report of 54th BOM and agenda items of 55th BOM. With the permission of the Chairman the Registrar presented the Action Taken Report (ATR) of 54th BOM. House approved the ATR of 54th Board of Management. Later, the following agenda items were taken-up for discussion and resolved as indicated below:

## 54th Action Taken Report

| No. | ಕಾರ್ಯಸೂಚಿ Agenda | ನಿರ್ಣಯ Resolution |
|---|---|---|
| 54/9. | ಕೃಷಿ ಮಹಾವಿದ್ಯಾಲಯ, ನವಿಲೆ ಆವರಣ ಶಿವಮೊಗ್ಗದಲ್ಲಿ 2024-25ನೇ ಸಾಲಿನ ಕೃಷಿ ಮತ್ತು ತೋಟಗಾರಿಕೆ ಮೇಳ (04 ದಿನಗಳು) ಬಾಡಿಗೆ ಆಧಾರದ ಮೇಲೆ ಪ್ರದರ್ಶನ ಮಳಿಗೆ ಮತ್ತು ಅಲೈಡ್ ವರ್ಕಗಳನ್ನು ಏರ್ಪಡಿಸುವುದು.<br><br>Arranging Exhibition Stall and Allied Works on Hired Basis for (4 days) Krishi & Thotagarike Mela 2024-25 at College of Agriculture, Navile, Shivamogga. | <u>54ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ</u><br>ಈ ಹಿಂದೆ 20-09-2024ರಂದು ನಡೆಸಲು ಉದ್ದೇಶಿಸಲಾಗಿದ್ದ ವ್ಯವಸ್ಥಾಪನಾ ಮಂಡಳಿ ಸಭೆಯನ್ನು 30-09-2024ಕ್ಕೆ ಮುಂದೂಡಲಾಯಿತು ಮತ್ತು ಕೃಷಿ ಮೇಳದ ದಿನಾಂಕಗಳು ನಿಗದಿಯಾಗಿದ್ದರಿಂದ ಮಂಡಳಿಯ ಅನುಮೋದನೆ ನಿರೀಕ್ಷಿಸಿ ಕಾರ್ಯಕೈಗೊಳ್ಳಲಾಗಿತ್ತು. ಗೌರವಾನ್ವಿತ ಮಂಡಳಿಯು 54ನೇ ಆಡಳಿತ ಮಂಡಳಿಯ ಸಭೆಯಲ್ಲಿ ರೂ. 98.50 ಲಕ್ಷ ಮೌಲ್ಯದ ಕಾರ್ಯಕೈಗೊಳ್ಳುವುದನ್ನು ಅನುಮೋದಿಸಲಾಯಿತು.<br><br>Since, the Board of Management meeting was earlier scheduled to be conducted on 20-09-2024 was postponed to 30-09-2024 and Krishimela is a scheduled event, due to urgency of the work, the University had accorded permission for the item with pending approval of the Board. However, the same was ratified in the 54th Board of Management by the Hon'ble Board to take up Rs. 98.50 lakhs work of Krushimela.<br><br><u>55ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚಿಸಲಾದ ವಿಷಯ</u><br>ಮುಂದುವರೆದು, 55ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಸದಸ್ಯರುಗಳ ತೀರ್ಮಾನದಂತೆ ರೂ. 83.47 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಹಣವನ್ನು ಪಾವತಿಸುವ ಮೊದಲು ಮಂಡಳಿಯ ಅನುಮೋದನೆ ಪಡೆಯಬೇಕೆಂದು ಸೂಚಿಸಲಾಗಿದೆ.<br><br>In the 55th Board of Management Meeting the Board approved an amount of Rs. 83.47 lakhs. Further, it was suggested to take the approval of the board before payment of the same.<br>**(Action: Estate Officer)** |

**ಚರ್ಚಿಸಿದ ಇನ್ನಿತರೆ ಅಂಶಗಳು: Other Issues Discussed**

1. ವ್ಯವಸ್ಥಾಪನಾ ಮಂಡಳಿಯ ಗೌರವಾನ್ವಿತ ಸದಸ್ಯರಾದ ಡಾ. ಪಿ.ಕೆ. ಬಸವರಾಜ ಅವರು ಅಧಿನಿಯಮದಲ್ಲಿರುವ ಅವಕಾಶಗಳನ್ನು ಉಲ್ಲೇಕಿಸಿ ಅಧಿಕಾರಿಗಳನ್ನು ಪ್ರಭಾರ ಇಡುವಾಗ ಕುಲಪತಿಗಳು 06 ತಿಂಗಳವರೆಗೆ ಪ್ರಭಾರ ಇಡಲು ಅವಕಾಶವಿರುತ್ತದೆ. ಆದ್ದರಿಂದ ಆರು ತಿಂಗಳಾದ ಮೇಲೆ ಪ್ರಭಾರ ಬದಲಿಸಬೇಕು/ರೋಟೇಶನ್‌ವಿದ್ದರೆ ಅಳವಡಿಸಿ ಮುಂದಿನ ಅವದಿಗೆ ಪ್ರಭಾರವಹಿಸಬೇಕು ಎಂದು ಆಡಳಿತ ಮಂಡಳಿ ಶಿಫಾರಸ್ಸು ಮಾಡಿತು. ಸದಸ್ಯರು ಇದನ್ನು ತಕ್ಷಣದಿಂದ ಜಾರಿಗೊಳಿಸಲು ಸೂಚಿಸಿದರು.

   Hon'ble Member of the Board of Management Dr. P.K. Basavaraja pointed out the provisions of the Act regarding keeping the Officer post on in-charge bans. As per the Act, The Vice Chancellor can make the in charge arrangement of any officer for a duration of Six months. So, Committee recommended that after six months officers should be changed/rotation system should be followed for the next continuation term. Members suggested that this should be implemented immediately.

   **54ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ**

   ವಿಶ್ವವಿದ್ಯಾಲಯವು ಸ್ವತಂತ್ರ ಪ್ರಭಾರ/ಅಧಿಕ ಪ್ರಭಾರದಲ್ಲಿರುವ ಅಧಿಕಾರಿಗಳ ಹುದ್ದೆಯ ಪ್ರಭಾರವನ್ನು ಬದಲಾವಣೆ/ರೊಟೇಶನ್ ಮಾಡುವ ಕುರಿತು ಸಂಖ್ಯೆ ಕೆ.ಶಿ.ನಾ.ಕೃ.ತೋ.ವಿ.ವಿ(ಶಿ)/ ಆ.ಶಾ./ಪ್ರಭಾರ/1777/2024-25, ದಿನಾಂಕ: 25-11-2024ರಂದು ಸುತ್ತೋಲೆಯನ್ನು ಹೊರಡಿಸಲಾಗಿದೆ. University has issued the circular about change/rotation of charge of the post of Officers In Charge/Independent Charge.

   **55ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚಿಸಲಾದ ವಿಷಯ**

   55ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಸದಸ್ಯರುಗಳು ಮತ್ತೆ ಈ ವಿಷಯವನ್ನು ಚರ್ಚಿಸಿದರು. ವಿಶ್ವವಿದ್ಯಾಲಯವು ಸ್ವತಂತ್ರ ಪ್ರಭಾರ/ಅಧಿಕ ಪ್ರಭಾರದಲ್ಲಿರುವ ಅಧಿಕಾರಿಗಳ ಹುದ್ದೆಯ ಪ್ರಭಾರವನ್ನು ಬದಲಾವಣೆ/ರೊಟೇಶನ್ ಮಾಡುವಂತೆ ತಿಳಿಸಿದ್ದರು ಕೂಡ ಕಾರ್ಯಕೈಗೊಳ್ಳದಿರುವುದಕ್ಕೆ ವಿವರಣೆಯನ್ನು ಕೇಳಿದರು ಅದಕ್ಕೆ ಮಾನ್ಯ ಕುಲಪತಿಗಳು ಘಟಿಕೋತ್ಸವದ ನಂತರ ಕಾರ್ಯಕೈಗೊಳ್ಳುವುದಾಗಿ ವಿವರಿಸಿದರು.

   In the 55th Board of Management Meeting, the Members again discussed the issue and asked for an explanation for the non-implementation of the change/rotation of the post of officer's In-charge/ independent charge. The Hon'ble Vice Chancellor informed the house that it would be implemented after the Convocation.

   **(Action: Registrar/Administrative Officer)**

2. ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಡಾ. ಪಿ.ಕೆ. ಬಸವರಾಜ ಇವರು ವಿಶ್ವವಿದ್ಯಾಲಯದಲ್ಲಿ ಪ್ರಯೋಗಾಲಯಗಳ ಪರಿಕರಗಳ ನಿರ್ವಹಣೆಗೆ ವಿಶ್ವವಿದ್ಯಾಲಯದ ನಿಧಿಯಿಂದ ಹಣಕಾಸು ಒದಗಿಸವಂತೆ, ರೈತ ಸ್ನೇಹಿ ಲ್ಯಾಬ್ ಸೌಲಭ್ಯಗಳನ್ನು ಹೆಚ್ಚಿನ ಎತ್ತರದಲ್ಲಿ ಇರಿಸಲು ಅಭಿಪ್ರಾಯ ತಿಳಿಸಿದರು.

   Hon'ble Member of the Board of Management Dr. P.K. Basavaraja brought the point after the discussion that there should be a financial provision from the University for maintaining the Laboratory equipments in the University, to keep the lab facilities farmers friendly.

   **54ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ**

   **Noted**

   **55ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚಿಸಲಾದ ವಿಷಯ**

   ವಿಶ್ವವಿದ್ಯಾಲಯದಲ್ಲಿ ಪ್ರಯೋಗಾಲಯಗಳ ಪರಿಕರಗಳು, ರೈತ ಸ್ನೇಹಿ ಲ್ಯಾಬ್ ಸೌಲಭ್ಯಗಳನ್ನು ನಿರ್ವಹಿಸುವಂತೆ ಮತ್ತು ಮಣ್ಣು ಪರೀಕ್ಷೆ ನಡೆಸಲು ಮಾದರಿಯನ್ನು ಪಡೆದು, ಪರೀಕ್ಷ ಸೌಲಭ್ಯಗಳು ಇಲ್ಲದಿದ್ದರೆ, ಸೌಲಭ್ಯವಿರುವ ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಿ ಪರೀಕ್ಷೆ ನಡೆಸಿ ವರದಿಯನ್ನು ಪಡೆಯುವಂತೆ ಸೂಚಿಸಿದರು.

   The Board suggested maintaining the laboratory equipments properly, and labs to be farmer friendly in the University. They suggested collecting samples for soil testing at all the soil testing centres of the University. If there are no facilities to test all the elements, the samples should be sent to other testing centres where the facility is available and the report to be got from them.

   **(Action: Director of Research, Director of Extension and Deans)**

3. ಬ್ರಹ್ಮಾವರ ಹಾಗೂ ಮೂಡಿಗೆರೆ ಕೆ.ವಿ.ಕೆ.ಗಳಲ್ಲಿ ಎ.ಎ.ಎಸ್ ತೆಗೆದುಕೊಂಡು 3–4 ವರ್ಷಗಳಾಗಿದ್ದರೂ ಅವುಗಳನ್ನು ಬಳಕೆ ಮಾಡಿಕೊಳ್ಳದಿರುವ ಕುರಿತು ವಿಚಾರಣೆಯನ್ನು ನಡೆಸಲು ಟೆಕ್ನಿಕಲ್ ಕಮಿಟಿಯನ್ನು ರಚಿಸಬೇಕೆಂದು ತಿಳಿಸಿದರು.

Member of the Board of Management advised that a Technical Committee should be formed to conduct enquiry "why Brahmavara and Mudigere KVKs. A A S are not put to use through they are purchased 3-4 years before".

**54ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ**

ಬ್ರಹ್ಮಾವರ ಹಾಗೂ ಮೂಡಿಗೆರೆ ಕೆ.ವಿ.ಕೆ.ಗಳಲ್ಲಿ ಎ.ಎ.ಎಸ್ ತೆಗೆದುಕೊಂಡು 3–4 ವರ್ಷಗಳಾಗಿದ್ದರೂ ಅವುಗಳನ್ನು ಬಳಕೆ ಮಾಡಿಕೊಳ್ಳದಿರುವ ಕುರಿತು ವಿಚಾರಣೆಯನ್ನು ನಡೆಸಲು ಟೆಕ್ನಿಕಲ್ ಕಮಿಟಿಯನ್ನು ಸಂಖ್ಯೆ ಕೆ.ಶಿ.ನಾ.ಕೃ ತೋ.ವಿ.ವಿ.(ಶಿ)/ಕು.ಸ./ಟೆಕ್ನಿಕಲ್ ಸಮಿತಿ/ 1274/2024–25, ದಿನಾಂಕ: 26–11–2024 ರಂತೆ ರಚಿಸಿ ವರದಿಯನ್ನು ಸಲ್ಲಿಸುವಂತೆ ಕೋರಲಾಗಿದೆ.

University has constituted a Technical Committee to conduct enquiry at Brahmavara and Mudigere KVKs.

**55ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚಿಸಲಾದ ವಿಷಯ**

ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳು, ವಿಚಾರಣೆಯನ್ನು ನಡೆಸಲು ಟೆಕ್ನಿಕಲ್ ಕಮಿಟಿಯನ್ನು ರಚಿಸಿದರೂ ಇಲ್ಲಿಯ ತನಕ ಯಾವುದೇ ರೀತಿಯ ಕ್ರಮಕೈಗೊಂಡ ವರದಿಯ ಬಗ್ಗೆ ತಿಳಿದುಬಂದಿರುವುದಿಲ್ಲ, ಆದ್ದರಿಂದ, ಕಮಿಟಿಯ ಅಧ್ಯಕ್ಷರಿಗೆ ವಿವರಣೆ ನೀಡುವಂತೆ ಸೂಚನೆ ನೀಡಲು ತಿಳಿಸಿದರು.

The Hon'ble Board Members discussed on the action taken on usage of AAS at KVKs by the Technical Committee. Therefore, the Board insisted to ask for explanation from the Chairmen of the Committees in this regard.

**(Action: Director of Research, Director of Extension and Dr. M.S Nagaraj, Professor COA, Smg)**

**4.** ಗೌರವಾನ್ವಿತ ಸದಸ್ಯರು ವಿಶ್ವವಿದ್ಯಾಲಯದ ವಸತಿನಿಲಯಗಳಿಗೆ ಸಿಬ್ಬಂದಿ ಬಾಡಿಗೆ ನೀಡುತ್ತಾರೆ, ಹಾಗಾಗಿ ಅವುಗಳ ನಿರ್ವಹಣೆಗೆ ಹಣಕಾಸು ಒದಗಿಸಬೇಕು. ವಸತಿನಿಲಯಗಳು ಬ್ರಹ್ಮಾವರ, ಮೂಡಿಗೆರೆ ಇತ್ಯಾದಿ ಸ್ಥಳಗಳಲ್ಲಿ ಬಹಳ ಹಾಳಾಗಿವೆ. ಇವುಗಳ ದುರಸ್ತಿ ಕಾರ್ಯವನ್ನು ಆದಷ್ಟು ಬೇಗ ಕೈಗೊಳ್ಳಬೇಕೆಂದು ಸೂಚಿಸಿದರು.

Hon'ble Members also suggested that the staff members pay rent for University Quarters. So, their maintenance should be financed. Dormitories are very dilapidated in Brahmavara, Mudigere etc. and suggested that the maintenance work should be undertaken as soon as possible.

**54ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ**

**Noted**

**55ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚಿಸಲಾದ ವಿಷಯ**

ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳು, ಬ್ರಹ್ಮಾವರ, ಮೂಡಿಗೆರೆ ಇತ್ಯಾದಿ ಸ್ಥಳಗಳಲ್ಲಿ ಬಹಳ ಹಾಳಾಗಿರುವ ವಸತಿನಿಲಯಗಳನ್ನು ಆದಷ್ಟು ಬೇಗ ದುರಸ್ತಿ ಕಾರ್ಯವನ್ನು ಕೈಗೊಳ್ಳಬೇಕೆಂದು ಮತ್ತೊಮ್ಮೆ ಸೂಚಿಸಿದರು.

Hon'ble Members once again suggested that the repair work should be carried out as soon as possible in the very dilapidated hostels at Brahmavara, Mudigere etc.

**(Action: Estate Officer, Comptroller, KSNUAHS, Shivamogga)**

## 55th Meeting Agenda Items

| No. | ಕಾರ್ಯಸೂಚಿ Agenda | ನಿರ್ಣಯ Resolution |
|---|---|---|
| 55/1 | ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಶಿವಮೊಗ್ಗದ 9ನೇ ಘಟಿಕೋತ್ಸವದಲ್ಲಿ 2023-24ನೇ ಸಾಲಿನಲ್ಲಿ ಪದವಿ ಪ್ರಮಾಣಪತ್ರ ಪಡೆಯಲು ಅರ್ಜಿ ಸಲ್ಲಿಸಿದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಪಟ್ಟಿಯ ಅನುಮೋದನೆ.<br>Approval of the list of Under Graduate and Post Graduates Students (2023-24) who have applied for 9th Convocation to be admitted to the B.Sc. (Hons.), Agriculture, B.Sc. (Hons.), Horticulture, B.Sc. (Hons.), Forestry, M.Sc. and Ph.D. Degree Programmes in KSNUAHS, Shivamogga either In person or In absentia. | ವಿಶ್ವವಿದ್ಯಾಲಯವು 9ನೇ ಘಟಿಕೋತ್ಸವದಲ್ಲಿ (2023-24ನೇ ಸಾಲಿನ 2ನೇ ಆವೃತ್ತಿ ವಿದ್ಯಾರ್ಥಿಗಳ) ಪ್ರಮಾಣಪತ್ರವನ್ನು ಪ್ರಧಾನ ಮಾಡಬೇಕಾದ ಸ್ನಾತಕ (377 ವಿದ್ಯಾರ್ಥಿಗಳು), ಸ್ನಾತಕೋತ್ತರ (67 ವಿದ್ಯಾರ್ಥಿಗಳು) ಹಾಗೂ ಪಿ.ಹೆಚ್.ಡಿ (15 ವಿದ್ಯಾರ್ಥಿಗಳು) ಸೇರಿದಂತೆ ವಿದ್ಯಾರ್ಥಿಗಳ ಪಟ್ಟಿಯನ್ನು ಮಂಡಳಿಯು ನಡಾವಳಿಯ ದೃಡೀಕರಣವಿಲ್ಲದೆ ಅನುಮೋದಿಸಿತು.<br>The Board approved the list of (2023-24 Batch) B.Sc. (377 Students), M.Sc. (67 students) and Ph.D (15 Students) of KSNUAHS, Shivamogga, who are to be conferred with the degrees in the 9th Convocation and it was approved without the confirmation of the Minutes.<br>**(Action: Registrar)** |
| 55/2 | ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಶಿವಮೊಗ್ಗದ 9ನೇ ಘಟಿಕೋತ್ಸವದಲ್ಲಿ ವಿಶ್ವವಿದ್ಯಾಲಯದ ಹಾಗೂ ದಾನಿಗಳ ಚಿನ್ನದ ಪದಕ ಪಡೆಯಲು (2023-24ನೇ ಸಾಲಿನಲ್ಲಿ) ಅರ್ಹರಿರುವ ಸ್ನಾತಕ ಮತ್ತು ಸ್ನಾತಕೋತ್ತರ ಅಭ್ಯರ್ಥಿಗಳ ಪಟ್ಟಿಯ ಅನುಮೋದನೆ.<br>Approval of the list of eligible Under Graduate and Post Graduate students (2023-24) who have completed their B.Sc. (Hons.) Agriculture, B.Sc. (Hons.) Horticulture, B.Sc. (Hons.) Forestry, M.Sc. (Agri.) M.Sc. (Hort.), M.Sc. (Forestry) and Ph.D. Programmes for the award of University/ Donors Gold Medals during the 9th Convocation. | ಮಂಡಳಿಯು (2023-24ನೇ ಸಾಲಿನ 2ನೇ ಆವೃತ್ತಿ ವಿದ್ಯಾರ್ಥಿಗಳ) ಅರ್ಹ ಬಿ.ಎಸ್ಸಿ, ಎಂ.ಎಸ್ಸಿ ಹಾಗೂ ಪಿ.ಹೆಚ್.ಡಿಯಲ್ಲಿ ತೇರ್ಗಡೆ ಹೊಂದಿ 9ನೇ ಘಟಿಕೋತ್ಸವದ ಸಂದರ್ಭದಲ್ಲಿ ವಿಶ್ವವಿದ್ಯಾಲಯದ/ದಾನಿಗಳ ಚಿನ್ನದ ಪದಕಗಳನ್ನು ನೀಡಬೇಕಾದ ವಿದ್ಯಾರ್ಥಿಗಳ ಪಟ್ಟಿಯನ್ನು ನಡಾವಳಿಯ ದೃಡೀಕರಣವಿಲ್ಲದೆ ಅನುಮೋದಿಸಿತು.<br>The Board approved the list of (2023-24 Batch) eligible B.Sc., M.Sc. and Ph.D. students of KSNUAHS, Shivamogga, who are to be award of University/ Donors Gold Medals during the 9th Convocation and it was approved without the confirmation of the Minutes.<br>**(Action: Registrar)** |

## ಹೆಚ್ಚುವರಿ ಕಾರ್ಯಸೂಚಿ Table Agenda

| | | |
|---|---|---|
| T.A 55/1 | ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಶಿವಮೊಗ್ಗದ 9ನೇ ಘಟಿಕೋತ್ಸವದಲ್ಲಿ 2023-24ನೇ ಸಾಲಿನಲ್ಲಿ ಪದವಿ ಪಡೆದ ಅರ್ಹ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ಖರೀದಿಸಲು ಆರ್ಥಿಕ ಹಾಗೂ ಆಡಳಿತಾತ್ಮಕ ಅನುಮೋದನೆ.<br>Administrative and financial approval to purchase gold medals for awarding the eligible students who have graduated in the year 2023-24 from KSNUAHS Shivamogga in the 9th convocation. | ವಿಶ್ವವಿದ್ಯಾಲಯವು ಶಿವಮೊಗ್ಗದ 9ನೇ ಘಟಿಕೋತ್ಸವದಲ್ಲಿ 2023-24ನೇ ಸಾಲಿನಲ್ಲಿ ಪದವಿ ಪಡೆದ ಅರ್ಹ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ಖರೀದಿಸಲು ಕೊಟೇಷನ್ ಕರೆಯುವ ಮೂಲಕ ಕಾರ್ಯ ಜರುಗಿಸಲು ನಡಾವಳಿಯ ದೃಡೀಕರಣವಿಲ್ಲದೆ ಆರ್ಥಿಕ ಹಾಗೂ ಆಡಳಿತಾತ್ಮಕ ಅನುಮೋದನೆಯನ್ನು ನೀಡಿತು.<br>The Board accorded the administrative and financial approval without the confirmation of the Minutes to purchase gold medals for deserving students (2023-24 Batch) during the 9th Convocation at KSNUAHS, Shivamogga by calling quotation.<br>**(Action: Registrar)** |

| | | |
|---|---|---|
| T.A 55/2 | ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಶಿವಮೊಗ್ಗದ ಇರುವಕ್ಕಿ ಆವರಣದ ಅರಣ್ಯ ಪದವಿ ಕಾರ್ಯಕ್ರಮಕ್ಕೆ ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆಯಲ್ಲಿನ ಹುದ್ದೆಗಳನ್ನು ಸಮಾನವಾಗಿ ಹಂಚಿಕೆ ಮಾಡುವ ಕುರಿತು.<br>Keladi Shivappa Nayaka University of Agricultural and Horticultural Sciences, Shivamogga regarding the equal distribution of Teaching and Non Teaching posts in Forestry College, Ponnampet to Iruvakki Campus, for the Forestry Degree Programme. | ಆಡಳಿತ ಮಂಡಳಿಯು ಇರುವಕ್ಕಿ ಆವರಣದ ಅರಣ್ಯ ಪದವಿ ಕಾರ್ಯಕ್ರಮಕ್ಕೆ ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆಯಲ್ಲಿನ ಹುದ್ದೆಗಳನ್ನು ಸಮಾನವಾಗಿ ಹಂಚಿಕೆ ಮಾಡಲು ನಡಾವಳಿಯ ದೃಢೀಕರಣವಿಲ್ಲದೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿತು.<br>The Board approved the proposal without confirmation of the Minutes, for the equal distribution of Teaching and Non Teaching posts of the College of Forestry, Ponnampet to Iruvakki Campus, for the Forestry Degree Programme.<br>**(Action: Administrative Officer)** |
| T.A 55/3 | ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಶಿವಮೊಗ್ಗದ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಿಗೆ ವಿದೇಶ ಪ್ರವಾಸದ ಪ್ರಸ್ತಾವನೆಗೆ ಅನುಮೋದನೆ ಕುರಿತು.<br>Approval of foreign tour (USA) for the Members of Board of Management of KSNUAHS, Shivamogga. | ಗೌರವಾನ್ವಿತ ವ್ಯವಸ್ಥಾಪನಾ ಮಂಡಳಿಯು ಈ ಕಾರ್ಯಸೂಚಿಯನ್ನು ಅನುಮೋದಿಸಿತು ಮತ್ತು ಸದಸ್ಯರು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲ ಹಾಗೂ ಐ.ಸಿ.ಎ.ಆರ್. ಹಣಕಾಸಿನ ಸಹಾಯದೊಂದಿಗೆ ಸರ್ಕಾರದ ಅನುಮೋದನೆ ಪಡೆದು ವಿದೇಶ ಪ್ರವಾಸ ಕೈಗೊಳ್ಳಲು ಸೂಚಿಸಿದರು<br>The Hon'ble Board approved the proposal and the Members were suggested to take a tour with the approval of the Government. And utilize the financial help of University Internal Resources and ICAR Fund.<br>**(Action: Administrative Officer/Comptroller)** |
| | **<u>ಚರ್ಚಿಸಿದ ಇನ್ನಿತರೆ ಅಂಶಗಳು: Other Issues Discussed</u>**<br>1. ಬ್ರಹ್ಮಾವರದ ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದಲ್ಲಿರುವ, ಎ.ಎ.ಎಸ್ ಉಪಕರಣವನ್ನು ಕೃಷಿ ವಿಜ್ಞಾನಗಳ ಮಹಾವಿದ್ಯಾಲಯದ, ಇರುವಕ್ಕಿಯ ಮಣ್ಣು ವಿಜ್ಞಾನ ವಿಭಾಗಕ್ಕೆ ಹಸ್ತಾಂತರಿಸುವಂತೆ ಮಂಡಳಿಯ ಸದಸ್ಯರುಗಳು ಸೂಚಿಸಿದರು<br>The Board Members suggested to hand over the laboratory equipment AAS from Zonal Agriculture and Horticulture Research Station, Brahmavara to the Department of Soil Science, College of Agricultural Sciences, Iruvakki.<br>**(Action: Registrar, Special Officer, CASI, Director of Research and Director of Extension)** | |

ಸದಸ್ಯ-ಕಾರ್ಯದರ್ಶಿಗಳು, ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

The Meeting ended with the proposal of Vote of Thanks by Member Secretary.

| Sd/- | Sd/- |
|---|---|
| (ಡಾ. ಆರ್. ಸಿ. ಜಗದೀಶ),<br>ಕುಲಪತಿಗಳು ಮತ್ತು ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ.<br>(Dr. R. C. Jagadeesha,)<br>Vice Chancellor - Chairman,<br>Board of Management. | (ಡಾ. ಕೆ. ಸಿ. ಶಶಿಧರ,)<br>ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿಗಳು, ವ್ಯವಸ್ಥಾಪನಾ ಮಂಡಳಿ.<br>(Dr. K. C. Shashidhar,)<br>Registrar & Member Secretary,<br>Board of Management |

ಕುಲಸಚಿವರು/Registrar

ಕುಲಸಚಿವರು
Registrar
ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗ
K.S.N.U.A.H.S., Shivamogga.